# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 211/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 29-07-2026 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಸೋಮಶೇಖರಯ್ಯ ಚಿಕ್ಕಮಠ | **ಪ್ರಾ.ಸಾ** ಃ 11 |
| **ತಂದೆ ಃ ಗಂಡ ಹೆಸರು** | ಃ ಚನ್ನಯ್ಯ | **ಚಾ.ಸಾ** ಃ 12 |
| **ವಯಸ್ಸು** | ಃ 49 ವರ್ಷ | |
| **ಉದ್ಯೋಗ** | ಃ ವ್ಯವಸಾಯ | |
| **ವಾಸಸ್ಥಳ** | ಃ ಯಲಿವಾಳ, ಕುಂದಗೋಳ ತಾಲೂಕ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1 ರವರ ಪರಿಚಯ ಇಲ್ಲ. . ನನಗೆ ಆರೋಪಿಯ ಪರಿಚಯ ಇದೆ. ಆರೋಪಿ ನನ್ನ ಅಣ್ಣ.

ನಾನು ಮಾರುತಿ ಸ್ವಿಪ್ಟ ಡಿಜೈರ ಕಾರ ಹೊಂದಿರುತ್ತೇನೆ. ಅದರ ನಂಬರ ನೆನಪಿಲ್ಲ. ಸದರಿ ವಾಹನವನ್ನು ಆರೋಪಿ ಚಲಾಯಿಸುತ್ತಿದ್ದ. ನನಗೆ ಅಪಘಾತದ ಬಗ್ಗೆ ಯಾವುದೆ ಮಾಹಿತಿ ಇಲ್ಲ. ಸುಮಾರು ಒಂದು ವರ್ಷದ ಹಿಂದೆ ಪೋಲೀಸರು ನನಗೆ ನೋಟೀಸ ಕೊಟ್ಟು ನನ್ನನ್ನು ಪೋಲೀಸ ಠಾಣೆಗೆ ಕರೆಯಿಸಿದ್ದು ನನ್ನಿಂದ ಬಾಂಡ್ ಪಡೆದುಕೊಂಡು ನನ್ನ ವಾಹನವನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ. ಇಂಡಮೀನಿಟಿ ಬಾಂಡ್‌ನ್ನು ನಿಪಿ-19, ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ನನಗೆ ಅಪಘಾತದ ಬಗ್ಗೆ ಯಾವುದೆ ಮಾಹಿತಿ ಇಲ್ಲ.

*(**ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,** ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 07.10.2022 ರಂದು ಕಲಘಟಗಿ ಪೋಲೀಸರು ನನಗೆ ನೋಟೀಸ ಕೊಟ್ಟು ನನ್ನ ವಾಹನ ಕಾರ ನಂ ಕೆಎ 42/ಎ 5975 ನೇದ್ದು ಯಲ್ಲಾಪುರದಿಂದ ಕಲಘಟಗಿ ಕಡೆಗೆ ವೇಗವಾಗಿ ಚಲಾಯಿಸಿಕೊಂಡು ಬಂದು ತಪ್ಪು ದಿಕ್ಕಿನಲ್ಲಿ ವಾಹನ ಚಲಾಯಿಸಿ ಕಲಘಟಗಿ ಕಡೆಯಿಂದ ಜುಂಜನಬೈಲ ಕಡೆಗೆ ಬರುತ್ತಿದ್ದ ಟಿ ವಿ ಎಸ್ ಎಕ್ಸಲ್ ಲೋನಾ ನಂ ಕೆಎ 25/ ಇ ವಾಯ 7616 ಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದು ವಾಹನ ಸವಾರ ನಾರಾಯಣ ಕಾಸರ ಇವರು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ ಅಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರು ನನ್ನ ವಾಹನವನ್ನು ಜಪ್ತಿ ಪಡಿಸಿಕೊಂಡು ನೋಟೀಸ ನೀಡಿದ್ದರು ಅಂದರೆ ಸರಿಯಲ್ಲ. ನೋಟೀಸಗೆ ನಾನು ಉತ್ತರ ನೀಡಿರುತ್ತೇನೆ ಅಂದರೆ ಸರಿಯಲ್ಲ. ದಿನಾಂಕ 11.10.2022 ರಂದು ನನ್ನ ವಾಹನದ ದಾಖಲೆಗಳನ್ನು ಹಾಜರ ಪಡಿಸಿ ನಿಪಿ-19 ರಂತೆ ವಾಹನವನ್ನು ನನ್ನ ಸುಪರ್ದಿಗೆ ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಅಪಘಾತ ಆರೋಪಿ ತಪ್ಪಿನಿಂದ ಆಗಿದ್ದು ಈ ಬಗ್ಗೆ ನನಗೆ ಗೊತ್ತಿದ್ದರೂ ಕೂಡಾ ಆರೋಪಿ ನನ್ನ ಅಣ್ಣನಾಗಿದ್ದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಆರ್ ಜಿ ವಕೀಲರಿಂದಃ**</u>

ಏನು ಇಲ್ಲ

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.